ತೆಗೆದುಕೊಂಡು ಅವುಗಳನ್ನು ತುಂಬಿ ಕೆಲಸ ಶೀಘ್ರವಾಗಿ ಆಗುವಂತೆ ಮಾಡಲು ನಾನು ಪ್ರಯತ್ನಪಡುತ್ತೇನೆ.

ಪ್ರಶ್ನೆ ಸಂಖ್ಯೆ 262(3162)

ಅಧ್ಯಕ್ಷರು :— ಮಾನ್ಯ ಸುಭಾಶ್ ಕಲ್ಲೂರ್‌ರವರೇ, ಮಾನ್ಯ ಗೃಹ ಸಚಿವರು ತಮ್ಮ ಪ್ರಶ್ನೆಗೆ ಉತ್ತರಿಸಲು ಒಂದು ವಾರ ಟೈಮ್ ಕೇಳಿದ್ದಾರೆ. ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಗೆ ಉತ್ತರಿಸಲು ನಾನು ಟೈಮ್ ಕೇಳಿಲ್ಲ. ಆ ಪ್ರಶ್ನೆ ಸಾರಿಗೆ ಇಲಾಖೆಗೆ ವರ್ಗಾವಣೆಯಾಗಿದೆ.

ಅಧ್ಯಕ್ಷರು :— ಇಲ್ಲಿ ಟೈಮ್ ಕೇಳಿದ್ದಾರೆ ಎಂದು ಮಾಹಿತಿ ಇದ್ದರಿಂದ ಆ ರೀತಿ ಹೇಳಿದೆ. ಒಟ್ಟಿನಲ್ಲಿ ಈ ಪ್ರಶ್ನೆ ವರ್ಗಾವಣೆಯಾಗಿ ಉತ್ತರಿಸಲು ಸಮಯ ಕೇಳಿದ್ದಾರೆ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯ ಪ್ರಗತಿ.

263(2862) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿನಗರ) :— ಮಾನ್ಯ ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಯೋಜನೆಯ ಪ್ರಗತಿ ಬಗ್ಗೆ ಪೂರ್ಣ ವಿವರ ನೀಡುವುದು?

ಆ) ಈ ವಿಮಾನ ನಿಲ್ದಾಣದ ಕಾಮಗಾರಿ ಯಾವಾಗ ಪ್ರಾರಂಭವಾಗುವುದು;

ಇ) ಈ ವಿಮಾನ ನಿಲ್ದಾಣ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು) :—

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣದಲ್ಲಿ ಈ ಕೆಳಕಂಡ ಪ್ರಗತಿ ಮಾಡಲಾಗಿದೆ.

1. ಬೆಂಗಳೂರು ದೇವನಹಳ್ಳಿ ಬಳಿ ನೂತನ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಭಾರತ ಸರ್ಕಾರವು ತತ್ವಶಃ ಒಳಗೊಂಡ ಒಪ್ಪಿಗೆಯನ್ನು ನೀಡಿದೆ.

2. ಹಾಗೂ ಭಾರತ ಸರ್ಕಾರವು ಪ್ರಸ್ತುತ ಚಾಲನೆಯಲ್ಲಿರುವ ಎಚ್.ಎ.ಎಲ್. ವಿಮಾನ ನಿಲ್ದಾಣವನ್ನು ನೂತನ ವಿಮಾನ ನಿಲ್ದಾಣದ ಕಾರ್ಯಾಚರಣೆ ಪ್ರಾರಂಭವಾದ ನಂತರ ಮುಚ್ಚಲೂ ಒಪ್ಪಿಕೊಂಡಿರುತ್ತದೆ.

3. ಭಾರತ ಸರ್ಕಾರವು ಪ್ರಸ್ತುತವಿರುವ ಎಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಅಂತರರಾಷ್ಟ್ರೀಯ ಸ್ಥಾನ ಮಾನಕ್ಕೆ ಒಪ್ಪಿಗೆ ನೀಡಿದ್ದು, ಸದರಿ ಸ್ಥಾನ ಮಾನವನ್ನು ದೇವನಹಳ್ಳಿಯಲ್ಲಿ ನೂತನ ವಿಮಾನ ನಿಲ್ದಾಣವು ಚಾಲ್ತಿಗೆ ಬಂದಕೂಡಲೇ ವರ್ಗಾಯಿಸಲು ಸಹ ಒಪ್ಪಿಕೊಂಡಿರುತ್ತದೆ.

4. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂಬ ಒಂದು ಹೊಸ ಕಂಪನಿಯನ್ನು ಪೂರ್ವಭಾವಿ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಮತ್ತು ಚುರುಕುಗೊಳಿಸಲು ಸ್ಥಾಪಿಸಲಾಗಿದೆ.

5. ವಿಮಾನ ನಿಲ್ದಾಣಕ್ಕೆ ಗುರುತಿಸಲಾದ ಜಾಗದಲ್ಲಿ ಇಂಜಿನಿಯರಿಂಗ್ ಸರ್ವೆಯನ್ನು ಪೂರ್ಣಗೊಳಿಸಲಾಗಿದೆ.

6. ಯೋಜನೆಯ ಸ್ಥಾಪನೆಗಾಗಿ ಬೇಕಾದ ಸಮ್ಮತಿಯಾದ (ಸಿ.ಇ.ಎಫ್) ಪರಿಸರ ವಿಮೋಚನೆಯನ್ನು ಪಡೆಯಲಾಗಿದೆ.

7. ಈ ಯೋಜನೆಗಾಗಿ ಸಹಭಾಗತ್ವದ ಪಾಲುದಾರ (ಜೆವಿಪಿ) ಆಯ್ಕೆಯು ಅಂತಿಮ ಹಂತದಲ್ಲಿದೆ. ಇದು ಯೋಜನೆಯ ನಿರ್ಮಾಣಕ್ಕಾಗಿ ಅತಿ ಮುಖ್ಯವಾದ ಹಂತವಾಗಿದೆ, ಏಕೆಂದರೆ ಆಯ್ಕೆಗೊಂಡ ಪಾಲುದಾರರಿಂದ ಯೋಜನೆಗಾಗಿ ಶೇಕಡಾ 74 ರಷ್ಟು ಈಕ್ವಿಟಿ ಬಂಡವಾಳ ಹೂಡಿಸಬೇಕಾಗಿರುತ್ತದೆ ಮತ್ತು ಶೇಕಡಾ 100ರಷ್ಟು ಸಾಲವನ್ನು ಒದಗಿಸಬೇಕಾಗಿರುತ್ತದೆ.

ಅ) ಜಂಟಿ ವಲಯ ಪಾಲುದಾರರೊಂದಿಗೆ ಅಗತ್ಯ ಒಪ್ಪಂದಗಳಿಗೆ ಸಹಿ ಹಾಕಿದ ನಂತರ ಹಾಗೂ ಹಣಕಾಸು ಒಪ್ಪಂದಗಳನ್ನು 2001-2002ನೇ ಸಾಲಿನಲ್ಲಿ ಸಾಧಿಸಿದ ನಂತರ 2002-2003ರಲ್ಲಿ ನಿರ್ಮಾಣ ಕಾರ್ಯವು ಪ್ರಾರಂಭಗೊಳ್ಳುವ ನಿರೀಕ್ಷೆಯಿದೆ.

ಆ) ನಿರ್ಮಾಣದ ಅವಧಿಯು 30 ರಿಂದ 36 ತಿಂಗಳುಗಳೆಂದು ಅಂದಾಜಿಸಲಾಗಿದೆ. ತದನಂತರ ಪರೀಕ್ಷಾರ್ಥ ಹಾರಾಟಗಳು ಇರುತ್ತವೆ ವಾಣಿಜ್ಯ ಸಂಚಾರವು 2005-2006ನೇ ಸಾಲಿನಲ್ಲಿ ಪ್ರಾರಂಭಗೊಳ್ಳುವ ನಿರೀಕ್ಷೆಯಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು:— ಮಾನ್ಯ ಅಧ್ಯಕ್ಷರೇ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಹೇಳಿಕೆಯೊಂದನ್ನು ನೀಡಿ 2001ರ ಜೂನ್ ತಿಂಗಳೊಳಗಾಗಿ ನಿಲ್ದಾಣ ಸ್ಥಾಪನೆಯ ಪಾಲುದಾರರೊಂದಿಗೆ ನಾವು ಸಹಿ ಹಾಕುತ್ತೇವೆ ಮತ್ತು 2002ನೇ ಇಸವಿಯಲ್ಲಿ ಇದರ ನಿರ್ಮಾಣ ಕಾರ್ಯವನ್ನು ಖಂಡಿತವಾಗಿಯೂ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇಂದಿನ ಉತ್ತರದಲ್ಲಿ ಮಾನ್ಯ ಸಚಿವರು 2002-2003ರಲ್ಲಿ ನಿರ್ಮಾಣ

ಕಾರ್ಯವು ಪ್ರಾರಂಭಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ. ಜನವರಿ ತಿಂಗಳಿನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ವಿಮಾನ ನಿಲ್ದಾಣದ ಸ್ಥಾಪನೆಗೆ ಶಂಕುಸ್ಥಾಪನೆ ಮಾಡಿದಾಗ ಎಲ್ಲಾ ಪತ್ರಿಕೆಗಳಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯ ಬಗ್ಗೆ 'ಶಾಪ ವಿಮೋಚನೆ' ಆಗಿದೆ ಎಂದು ವರದಿಯಾಗಿತ್ತು. ಆದರೆ ಈಗ ಇದು ಮತ್ತೆ 'ಶಾಪಗ್ರಸ್ಥ' ಆಗಿದೆ ಎಂದು ನನಗನಿಸುತ್ತಿದೆ. ನಿರ್ಮಾಣ ಕಾರ್ಯವನ್ನು ಖಂಡಿತವಾಗಿಯೂ ಯಾವಾಗ ಪ್ರಾರಂಭ ಮಾಡಲಾಗುವುದು? ಹಿಂದೆ ಟಾಟಾ ಕಂಪೆನಿ ಸಮಾಜದ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು, ನಂತರ ಅದು ರದ್ದಾಯಿತು. ಸೀಮೆನ್ಸ್ ಕಂಪೆನಿಯ ಜೊತೆಗೆ ಈಗ ಒಪ್ಪಂದಕ್ಕೆ ಸಹಿ ಹಾಕುವ ಯೋಚನೆ ಇದೆ ಎಂಬುದಾಗಿ ತಿಳಿದು ಬಂದಿದೆ. ಇದು ಯಾವಾಗ ಆಗುತ್ತದೆ? ಎಂಬ ವಿಚಾರವನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕಾಗಿ ನಾನು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ದೇವನಹಳ್ಳಿ ಏರ್‌ಪೋರ್ಟ್ ಸ್ಥಾಪನೆ ಬಗ್ಗೆ ಸೀಮೆನ್ ಕಂಪೆನಿ ಜೊತೆಯಲ್ಲಿ ಮಾತುಕತೆ ನಡೆದಿದೆ. ಇದರ ಬಗ್ಗೆ 19ನೇ ತಾರೀಖಿನಂದು ಒಂದು ಮೀಟಿಂಗ್ ಕೂಡ ನಡೆದಿದ್ದು, ಸ್ಟಿಯರಿಂಗ್ ಕಮಿಟಿಯು ಕಂಪೆನಿ ಜೊತೆಗೆ ಮಾತುಕತೆ ನಡೆಸಿದೆ. ನೆಗೋಷಿಯೇಷನ್ ಆದಮೇಲೆ ಹಣ ಹೆಚ್ಚು ಕಡಿಮೆ ಆಗತಕ್ಕ ಸಾಧ್ಯತೆಗಳಿವೆ. ಇದಾದ ಮೇಲೆ ಆ ಕೆಲಸವನ್ನು ಆ ಕಂಪೆನಿಗೆ ವಹಿಸಿಕೊಡಲಾಗುವುದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ನಿಗದಿಪಡಿಸಿದಂತಹ ಡೇಟಿಗೆ ಅನುಸಾರವಾಗಿಯೇ ಕೆಲಸ ಪ್ರಾರಂಭವಾಗುತ್ತದೆ. ಇದು ಮುಂದಕ್ಕೆ ಹೋಗುವುದಿಲ್ಲ. ಪ್ರತಿಯೊಂದರ ಬಗ್ಗೆ ಈಗಾಗಲೇ ಟೈಮ್ ಟೇಬಲ್ ಹಾಕಿಕೊಳ್ಳಲಾಗಿದೆ. 2002ರ ಜನವರಿಯಿಂದ ಮಾರ್ಚ್‌ನೊಳಗಾಗಿ ಅಂದಾಜು ಇದು ಪ್ರಾರಂಭವಾಗುತ್ತದೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಹೇಳಿದ್ದರು. ಈಗಲೂ ಕೂಡ ನಾವು ಆ ಮಾತಿಗೆ ಬದ್ಧರಾಗಿದ್ದು, ಆ ದಿಕ್ಕಿನಲ್ಲಿ ಕೆಲಸ ಕೂಡ ನಡೆಸಲಾಗುತ್ತಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಮೊದಲು ಟೆಂಡರ್ ಕಾಲ್‌ಫಾರ್ ಮಾಡಿದಾಗ ಸುಮಾರು 17 ಜನ ಬಂದಿದ್ದರು. ಎಲ್ಲಾ ಪ್ರೋಸಸ್ ಮಾಡಿದ ನಂತರ ಅವರಲ್ಲಿ 7 ಜನರ ಜೊತೆಯಲ್ಲಿ ಮಾತುಕತೆ ನಡೆಯಿತು. ತದನಂತರ ಆ 7 ಜನರ ಪೈಕಿ ಇಬ್ಬರನ್ನು ಆಯ್ಕೆ ಮಾಡಲಾಯಿತು. ಆ ಇಬ್ಬರ ಪೈಕಿ ಅತ್ಯಂತ ಕಾಂಪಿಟೇಟಿವ್ ರೇಟ್‌ನಲ್ಲಿ ನಿರ್ಮಾಣ ಮಾಡುತ್ತೇವೆ ಎಂದು ಸೀಮೆನ್ ಕಂಪೆನಿಯವರು ಮುಂದೆ ಬಂದಿದ್ದಾರೆ. ಈಗ ಅವರ ಜೊತೆಯಲ್ಲಿ ಮಾತುಕತೆ ನಡೆದಿದೆ. ಆಗಸ್ಟ್ ತಿಂಗಳ ಅಂತ್ಯದೊಳಗಾಗಿ ಮಾತುಕತೆ ಹೆಚ್ಚು ಕಡಿಮೆ ಮುಗಿಯುತ್ತದೆ. ಅಧಿವೇಶನ ನಡೆಯುತ್ತಿರುವ ಕಾರಣದಿಂದಾಗಿ ಅಧಿಕಾರಿಗಳು ಆ ಕೆಲಸದಲ್ಲಿ ಹೆಚ್ಚು ಮಗ್ನರಾಗಿರುತ್ತಾರೆ. ಆದ್ದರಿಂದ ಮಾತುಕತೆ ಸ್ವಲ್ಪ ಕುಂಠಿತವಾಗಿದೆ. 13ನೇ ತಾರೀಖಿನಿಂದ ಸತತವಾಗಿ ಸೀಮೆನ್ಸ್ ಕಂಪೆನಿಯ ಜೊತೆಗೆ ಅಧಿಕಾರಿಗಳು ಚರ್ಚೆ ಮಾಡಿ ಇದನ್ನು ಸೆಟ್ಲ್ ಮಾಡುತ್ತಾರೆ.

ಆಗಸ್ಟ್ ತಿಂಗಳ ಅಂತ್ಯದೊಳಗಾಗಿ ಇದು ಸೆಟ್ಲ್ ಆದಮೇಲೆ ಅವರು ಪುನಃ ತಮ್ಮ ಫೈನಾನ್ಷಿಯಲ್ ಇನ್ಸ್ಟಿಟ್ಯೂಷನ್ಸ್ ಜೊತೆಗೆ ಮಾತುಕತೆ ನಡೆಸಿ ಅವರು ಒಂದು ತೀರ್ಮಾನಕ್ಕೆ ಬರುತ್ತಾರೆ. ಕೊನೆಯದಾಗಿ, ಅಂದಾಜು 2002ರ ಜನವರಿಯಿಂದ ಮಾರ್ಚ್ ತಿಂಗಳೊಳಗಾಗಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಈ ಕೆಲಸ ನಿಲ್ಲುವುದಿಲ್ಲ ಎಂಬ ಮಾತನ್ನು ನಾನು ಇವತ್ತು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ವಾಜಪೇಯಿಯವರು ಶಂಕುಸ್ಥಾಪನೆ ಮಾಡಿರುವ ಈ ವಿಮಾನ ನಿಲ್ದಾಣ ನಿರ್ಮಾಣದ ಕಾರ್ಯ ನಿಲ್ಲುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ವಿಶೇಷ ಆಸಕ್ತಿವಹಿಸಿ ಇದಕ್ಕಾಗಿಯೇ ಸ್ಟಿಯರಿಂಗ್ ಕಮಿಟಿಯನ್ನು ರಚಿಸಿದ್ದಾರೆ. ಇದರ ಮುಖ್ಯಸ್ಥರಾದ ಮಾನ್ಯ ನಾರಾಯಣಮೂರ್ತಿಯವರೂ ಕೂಡ ಅಷ್ಟೇ ಆಸಕ್ತಿವಹಿಸಿ ಕೆಲಸವನ್ನು ಮಾಡುತ್ತಿದ್ದಾರೆ.ಪ್ರತಿ ಹಂತದಲ್ಲೂ ಕೂಡ ನಮ್ಮ ಷೆಡ್ಯೂಲ್ ಪ್ರಕಾರವೇ ಕೆಲಸ ನಡೆದಿದೆ. ಇದನ್ನು ನಿಲ್ಲಿಸತಕ್ಕಂಥ ಪ್ರಶ್ನೆಯೇ ಇಲ್ಲ. ನಾವು ಅನೌನ್ಸ್ ಮಾಡಿರುವ ಷೆಡ್ಯೂಲ್ ಪ್ರಕಾರವೇ ಕೆಲಸವನ್ನು ಮಾಡಿ ದೇವನಹಳ್ಳಿ ಏರ್‌ಪೋರ್ಟ್‌ನ್ನು ಆಸ್ತಿತ್ವಕ್ಕೆ ತರತಕ್ಕಂಥ ಸಂಪೂರ್ಣವಾದ ಜವಾಬ್ದಾರಿಯನ್ನು ನಾವು ವಹಿಸಿಕೊಂಡಿದ್ದೇವೆ. ಆ ಕೆಲಸವನ್ನು ನಾವು ಮಾಡಿ ತೋರಿಸುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :— ಮಾನ್ಯ ಅಧ್ಯಕ್ಷರೇ, ವಿಮಾನ ನಿಲ್ದಾಣಕ್ಕಾಗಿ ಒಟ್ಟಾರೆ 2,000 ಎಕರೆಗಳ ಜಮೀನು ಬೇಕೆಂದು ಹೇಳಲಾಗಿತ್ತು. ನಮಗೆ ತಿಳಿದು ಬಂದ ಮಾಹಿತಿಯ ಪ್ರಕಾರ ಇನ್ನೂ ಕೆಲವು ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆ ನಡೆದಿಲ್ಲ, ಇದು ನಿಜವೇ? ಹಾಗೇನಾದರೂ ಇದ್ದರೆ ಪೂರ್ತಿ ಜಮೀನನ್ನು ಯಾವಾಗ ಭೂ ಸ್ವಾಧೀನ ಮಾಡಿಕೊಳ್ಳಲಾಗುವುದು? ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಭೂಮಿಯನ್ನು ಇದಕ್ಕಾಗಿ ಖರೀದಿ ಮಾಡುತ್ತಿದ್ದೇವೆ. ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರು ನೇರವಾಗಿ ಜಿಲ್ಲಾಧಿಕಾರಿಗಳ ಮುಖಾಂತರ ಕನ್‌ಸೆಂಟ್ ಮೇಲೆ ಖರೀದಿ ಮಾಡತಕ್ಕಂಥ ಎಲ್ಲಾ ಪ್ರತಿಕ್ರಿಯೂ ನಡೆದಿದ್ದು, ಅದು ಈಗಾಗಲೇ ಮುಗಿಯುವ ಹಂತದಲ್ಲಿದೆ. ಯಾವುದೂ ಕೂಡ ಹಣದ ಕೊರತೆಯಿಂದ ನಿಂತಿಲ್ಲ. ಆ ಕೆಲಸ ಖಂಡಿತಾ ಮುಗಿಯುತ್ತದೆ. ನಾನು ಆಗಲೇ ಹೇಳಿದಂತೆ ಆಗಸ್ಟ್ ತಿಂಗಳಿನಲ್ಲಿ ಕಂಪೆನಿಯ ಜೊತೆಗೆ ನೆಗೋಷಿಯೇಷನ್ ಮುಗಿದ ನಂತರ ಮುಂದಿನ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಅಗತ್ಯ ಜಮೀನನ್ನು ಸರ್ಕಾರ ಆ ಕಂಪೆನಿ ವಶಕ್ಕೆ ಕೊಡುತ್ತದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಅಧ್ಯಕ್ಷರೇ, ಬಹಳ ದಿವಸಗಳಿಂದ ದೇವನಹಳ್ಳಿ ಏರ್‌ಪೋರ್ಟ್ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿದೆ. ಮಾನ್ಯ

ಖರ್ಗೆಯವರು ಇಂತಹ ದಿನಾಂಕದಂದು ಇದರ ನಿರ್ಮಾಣ ಕಾರ್ಯ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದು ಕೇಳಿ ನನಗಂತೂ ಬಹಳ ಸಂತೋಷವಾಯಿತು. ಈ ಇಂಟರ್ ನ್ಯಾಷನಲ್ ಏರ್‌ಪೋರ್ಟಿಗೆ ಬೆಂಗಳೂರಿನ ಸಂಸ್ಥಾಪಕರಾದಂತಹ ಕೆಂಪೇಗೌಡರ ಹೆಸರನ್ನು ಇಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳಲಿಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ಮಾನ್ಯ ಸಚಿವರು ಪ್ರತಿಕ್ರಿಯಿಸಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ವಿಮಾನ ನಿಲ್ದಾಣ ಆಗುವುದಕ್ಕಿಂತ ಮುಂಚೆಯೇ ನಾವು ಅದಕ್ಕೆ ಯಾವ ಹೆಸರಿಡಬೇಕೆಂಬ ಬಗ್ಗೆ ಚರ್ಚೆ ಮಾಡಿದರೆ ಅದೊಂದು ಕಾಂಟ್ರವರ್ಸಿಯಾಗುತ್ತದೆ. ಮೊದಲು ನಾವು ಏರ್‌ಪೋರ್ಟ್ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸೋಣ. ನಂತರ ಅದಕ್ಕೆ ಏನು ಹೆಸರಿಡಬೇಕೆಂಬ ಬಗ್ಗೆ ಯೋಚಿಸೋಣ.

ಬೆಂಗಳೂರು ನಗರದಲ್ಲಿ ಅಸಮರ್ಪಕ ಪಡಿತರ ವ್ಯವಸ್ಥೆ.

264(2899) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) :— ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಗ್ರಾಹಕ ಪಡಿತರ ವ್ಯವಸ್ಥೆ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಅಸಮರ್ಪಕ ನಿರ್ವಹಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಸರ್ಕಾರ ಪತ್ತೆ ಹಚ್ಚಿದೆ?

3) ಹಾಗಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ಕೇಸುಗಳನ್ನು ದಾಖಲು ಮಾಡಲು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು) :—

1) ಬೆಂಗಳೂರು ನಗರ ಹಾಗೂ ರಾಜ್ಯದಲ್ಲಿ ಪಡಿತರ ವ್ಯವಸ್ಥೆ ಸಮರ್ಪಕವಾಗಿ ನಡೆಯುತ್ತಿದ್ದು, ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ ಲೋಪಗಳು ಕಂಡು ಬಂದದ್ದು, ಅಂತಹ ಪ್ರಕರಣಗಳಲ್ಲಿ ಕಾನೂನಿನನ್ವಯ ಕ್ರಮ ಕೈಗೊಳ್ಳಲಾಗಿದೆ.

2) ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಈ ಕೆಳಗಿನಂತೆ ಅವ್ಯವಹಾರದ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.